## ವಾರದ ಕತೆ



# ಸ್ವರ್ಗ ಶಿಲ್ಪಿ

**ಆಯಿಷಾಳೊಂದಿಗೆ** ಗುಡ್ಡದ ಮೇಲಿನ ಬಂಗ್ಲೆಯನ್ನು ಪ್ರವೇಶಿಸಿದಾಗ ಸಮಯ ನಾಲ್ಕು ಗಂಟೆ ಕಳೆದಿತ್ತು. ಕುದುರೆ ಗಾಡಿಯನ್ನು ಗುಡ್ಡದ ಕೆಳಗೆ ನಿಲ್ಲಿಸಿ ಗುಡ್ಡವನ್ನು ಹತ್ತಿದರು. ಕಾರುಗಳು ಹೋಗಲೆಂದು ಗುಡ್ಡವನ್ನು ಸುತ್ತಿಕೊಂಡಂತೆ ಬೆಣಚು ಕಲ್ಲಿನ ಒಂದು ರಸ್ತೆ ಇದೆ. ನಡೆದು ಹತ್ತಲೆಂದು ಕತ್ತರಿಸಿ ತುಂಡು ಮಾಡಿದ ಕಲ್ಲು ಮೆಟ್ಟಿಲುಗಳು. ಮೆಟ್ಟಿಲುಗಳನ್ನು ಹತ್ತಿ ಮೇಲಕ್ಕೆ ಬಂದಾಗ ಆಯಿಷಾ ಸುಸ್ತಾಗಿದ್ದಳು. ಸಲೀಂಗೆ ಗುಡ್ಡದ ಮೇಲಕ್ಕೆ ಹೋಗಿ ಬರುವುದು ಪರಿಚಿತವಾಗಿ ಹೋಗಿತ್ತು. ಅಲ್ಲಿಯ ಐವತ್ತೆಂಟು ಮೆಟ್ಟಿಲುಗಳು ಅವನಿಗೆ ಚೆನ್ನಾಗಿ ಬಾಯಿಪಾಠವಾದಂತಿದ್ದವು. ಗುಡ್ಡದ ಮೇಲಕ್ಕೆ ಬಂದಾಗಲೇ ಬಂಗ್ಲೆಯು ಸರಿಯಾಗಿ ದೃಷ್ಟಿಗೆ ಗೋಚರಿಸಿದ್ದು. ಬಂಗಲೆಯ ಬೃಹದಾಕಾರವು ಅವಳನ್ನು ಚಕಿತಗೊಳಿಸಿತು.

'ನನ್ನ ರಾಜ, ನೀವು ಇಷ್ಟು ದೊಡ್ಡ ಮನೆಯಲ್ಲೇನೇ ವಾಸವಾಗಿರುವುದು?' ಕೈಯಲ್ಲಿದ್ದ ಬೀಗದ ಕೈಗೊಂಚಲಿನಿಂದ ದೊಡ್ಡ ಬೀಗದ ಕೈಯೊಂದನ್ನು ತೆಗೆದು ಬಾಗಿಲನ್ನು ತೆರೆಯುವಾಗ ಸಲೀಂ ಅವಳನ್ನು ಕೇಳಿದನು:

'ಆಯಿಷಾ, ನನ್ನ ಮನೆ ಹೇಗಿದೆ?''

'ಹುಂ' ಅವಳು ನಗುತ್ತಾ ಹೇಳಿದಳು: 'ನಿಮ್ಮ ಮನೆಯೊಂದು ಮಸೀದಿಯೆಂದು ಹೇಳಬಹುದು.

ಬಾಗಿಲು ತೆರೆದಾಗ ವಿಶಾಲವಾದ ವರಾಂಡವು ತನ್ನೆಲ್ಲ ಚೆಲುವಿನೊಂದಿಗೆ ಅವಳ ಮುಂದೆ ಪ್ರತ್ಯಕ್ಷವಾಯಿತು. ಗ್ರಿಲ್ ಹಾಕಿದ ದೊಡ್ಡ ದೊಡ್ಡ ಕಿಟಕಿಗಳ ಮೂಲಕ ಬರುವ ಸೂರ್ಯ ಪ್ರಕಾಶವು ಗ್ರಾನೈಟ್ ಹಾಕಿದ್ದ ನೆಲದ ಮೇಲೆ ಪಸರಿಸಿತ್ತು, ಗಾಳಿಯಲ್ಲಿ ತೆಳ್ಳಗಿನ ಕರ್ಟನ್‌ಗಳು ಆಡುತ್ತಿದ್ದವು. ಎತ್ತರಕ್ಕೇರುವ ಮೇಲ್ಛಾವಣಿಯಿಂದ ಜೋತು ಬಿದ್ದಿರುವ ಎರಡು ತೂಗುದೀಪಗಳನ್ನು ನೋಡುತ್ತಾ ಅವಳು ಕೇಳಿದಳು:

ಮಲೆಯಾಳಂ ಮೂಲ:
● ಇ. ಹರಿಕುಮಾರ್
ಕನ್ನಡಕ್ಕೆ:
● ಎಂ.ಎಸ್. ಲಕ್ಷ್ಮಣಾಚಾರ್

''ಇದು...''

''.... ಸ್ವರ್ಗ'' ಸಲೀಂ ಹೇಳಿದನು.

ಅವಳು ಸಂಶಯದೊಂದಿಗೆ, ಅಸೂಯೆಯೊಂದಿಗೆ ತನ್ನನ್ನು ನೋಡಿದಾಗ ಅವನಿಗೇಕೋ ಏನೋ ಒಂದು ತರವಾಯಿತು.

ಅವನು ಸೂಟ್‌ಕೇಸಿನೊಂದಿಗೆ ವಿಶಾಲವಾದ ಮಲಗುವ ಕೋಣೆಗೆ ಅವಳನ್ನು ಕರೆದುಕೊಂಡು ಹೋದನು. ನೆಲದಲ್ಲಿ ಹಾಸಿದ್ದ ರತ್ನಗಂಬಳಿ ಅವಳ ಮೃದುವಾದ ಕಾಲುಹೆಜ್ಜೆಗಳನ್ನು ಕಿಚಿ ಕಿಚಿ ಮಾಡಿತು. ನಡುವೆ ಹಾಸಿದ್ದ ದೊಡ್ಡ ಜೋಡಿ ಮಂಚದ ಮೇಲೆ ವೆಲ್ವೆಟ್‌ನ ನೀಲಿ ಬೆಡ್‌ಶೀಟ್ ಹಾಸಲ್ಪಟ್ಟಿತ್ತು. ಗೋಡೆಯ ತುಂಬ ಮರದಿಂದ ಮಾಡಲ್ಪಟ್ಟ ಕನ್ನಡಿಯ ಗೂಡುಗಳು.

''ಇದೇ ನಮ್ಮ ಮಲಗುವ ಕೋಣೆ'' ಸಲೀಂ ಹೇಳಿದನು. ''ಇಗೋ ಇದು ಸ್ನಾನದ ಕೋಣೆ'' ಒಳಗೆ ಬಾ. ಸಲೀಂ ಸ್ನಾನದ ಕೋಣೆಯಲ್ಲಿನ ಉಪಕರಣಗಳನ್ನು ಒಬ್ಬ ಮಂತ್ರವಾದಿಯಂತೆ ಅವಳಿಗೆ ತೋರಿಸಿ ಕೊಡುತ್ತಿದ್ದನು. ಸ್ವಿಚ್ ಹಾಕಿದರೆ ಬಿಸಿನೀರು ಬರುವ ನಲ್ಲಿ, ಮಲಗಿ ಮೀಯಲು ತಕ್ಕ ವಾಶ್ ಟಬ್, ಷವರ್, ಟೆಲಿಫೋನ್, ಕನ್ನಡಿ.

ಅವಳು ಚಕಿತಳಾಗಿ ನಿಂತಿದಳು. ಮದುವೆಯಾದ ಪ್ರಥಮ ರಾತ್ರಿಯಲ್ಲಿ ಸಲೀಂ ಈ ಬಂಗ್ಲೆಯ ಬಗ್ಗೆ ಅವಳಿಗೆ ಹೇಳಿದ್ದನು. ಅದರ ಯಜಮಾನನಾದ ಪೋಕರ್ ಸಾಹೇಬರ ಬಗ್ಗೆಯೂ ಹೇಳಿದ್ದನು.

''ನಿನ್ನನ್ನು ನಾನು ಒಂದು ಅರಮನೆಗೆ ಕರೆದುಕೊಂಡು ಹೋಗುತ್ತೇನೆ. ಅವಳು ಮೆಲ್ಲನೆ ನಾಚಿಕೆಯಿಂದ ಅವನ ಕಿವಿಯಲ್ಲಿ ಉಸುರಿದ್ದಳು.

''ಹಾಗಾದಲ್ಲಿ, ಅಲ್ಲಿ ಹೋದ ಮೇಲೆ ಸಾಕು ನೀವು ನನ್ನನ್ನು ನೋಯಿಸುವುದು''

''ನೋಯಿಸುವುದೇ?''

''ಹೌದು. ಸ್ವಲ್ಪ ಮುಂಚೆ ನೀವು ನನ್ನನ್ನು ನೋಯಿಸಲಿಲ್ಲವೇ? ಅದು... ಸಲೀಂ ನಕ್ಕಿದ್ದನು.

'ಅದೇಕೆ, ಆಯಿಷಾ?'

'ಅದು ಅಲ್ಲಾಗುವಾಗ ನಾನು ಅತ್ತರೂ ಸಹ ಯಾರಿಗೂ ಕೇಳಿಸುವುದಿಲ್ಲವಲ್ಲ, ಇಲ್ಲಾದರೆ ಅಮ್ಮ-ಅಪ್ಪನಿಗೆ ಕೇಳಿಸುತ್ತಲ್ಲವೇ?'

ಅವನು ಸ್ವಲ್ಪ ಹೊತ್ತು ಆಲೋಚಿಸಿದ್ದನು! ತನಗೆ ಬೇಕಾಗಿ ನೋವನ್ನು ಸಹಿಸಲು ಸಿದ್ಧಳಾದ ಒಬ್ಬಳು ಹುಡುಗಿ. ಅವನ ತಾಯಿ ಅವನಿಗೆ ಎಂಟು ವರ್ಷ ವಯಸ್ಸಾದಾಗಲೇ ತೀರಿ ಹೋಗಿದ್ದಳು. ಆಕೆ ಅವನಿಗೆ ಬೇಕಾಗಿ ನೋವನ್ನು ಸಹಿಸಿದ ಮೊದಲ ಸ್ತ್ರೀಯಾಗಿದ್ದಳು. ಆಕೆ ತನಗೆ ಜನ್ಮವನ್ನೀಯಲು ನೋವನ್ನು ತಿಂದ ಸ್ತ್ರೀ. ಈಗ ಇಲ್ಲಿ ತನಗೆ ಸುಖವನ್ನೀಯಲು ನೋವು ಸಹಿಸಲು ಸಿದ್ಧಳಾಗಿ ಒಬ್ಬಳು ಹುಡುಗಿ. ಅವನ ಮನಸ್ಸಿನಲ್ಲೆಲ್ಲೋ ಪ್ರೀತಿಯ ತಳಿರುಗಳು ಚಿಗುರಿದ್ದವು. ಮೊಗ್ಗುಗಳು ಹೂವಾಗಿ ಬಿರಿದಿದ್ದವು.

ಒಂದು ಕೋಣೆಯಿಂದ ಮತ್ತೊಂದು ಕೋಣೆಗೆ ಪ್ರವೇಶಿಸಲು ದೊಡ್ಡ ಕಿಟಕಿಗಳುಳ್ಳ ವರಾಂಡಗಳು. ಬೆಳಕಿರುವ ಕಾರಿಡಾರ್‌ಗಳು, ಕಮಾನುಗಳು.

''ನೀವು ಅರಮನೆ ಎಂದು ಹೇಳಿದಾಗಲೂ ನಾನು ಅದು ಭವ್ಯವಾಗಿದೆ ಎಂದು ಅಂದುಕೊಂಡಿರಲಿಲ್ಲ. ಅವಳು ಹೇಳಿದಳು ಯಾವತ್ತು ನಿಮ್ಮ ಯಜಮಾನರು ವಾಪಸ್ ಬರುವುದು?''

''ಇವತ್ತು ದುಬಾಯಿಗೆ ಹೋಗಿದ್ದಾರಷ್ಟೆ, ಅವರು ಬರುವುದಕ್ಕೆ ಎರಡು ವಾರಗಳಾಗುತ್ತೆ.''

ಯಜಮಾನರ ರಫ್ತು ಬಿಸಿನೆಸ್ ಕೋಜಿಕ್ಕೋಡ್‌ನಲ್ಲಾಗಿತ್ತು. ಇಲ್ಲಿರುವ ಎಸ್ಟೇಟ್ ಕೆಲಸ ಕಾರ್ಯಗಳನ್ನು ನೋಡಿಕೊಳ್ಳಲು ಮೆನೇಜರ್ ಮತ್ತು ಕೆಲಸದವರು ಇದ್ದಾರೆ. ಆದ್ದರಿಂದ ಯಜಮಾನರು ವಿರಳವಾಗಿಯೇ ಎಸ್ಟೇಟ್‌ಗೆ ಬರುತ್ತಿದ್ದರು. ಯಜಮಾನರ ಬಂಗ್ಲೆಯನ್ನು ಸಲೀಂ ನೋಡಿಕೊಳ್ಳುತ್ತಿದ್ದನು. ಬಂಗ್ಲೆಯನ್ನು ಚೆನ್ನಾಗಿ ನೋಡಿಕೊಳ್ಳುವುದು, ಯಜಮಾನರು ಬಂದಾಗ ಅವರಿಗೆ ಆಹಾರವನ್ನು ತಯಾರು ಮಾಡಿಕೊಡುವುದು, ಅವರ ಸುಖ ಸೌಕರ್ಯಗಳನ್ನು ನೋಡಿಕೊಳ್ಳುವುದು ಮೊದಲಾದ ಕೆಲಸವು ಸಲೀಂನದಾಗಿತ್ತು. ಅಂಗಣದಲ್ಲಿದ್ದ ಮನೋಹರವಾದ ತೋಟದ ಶಿಲ್ಪಿಯೂ ಅವನೇ ಆಗಿದ್ದನು. ಅವನು ತನ್ನ ಹದಿನಾರನೆಯ ವಯಸ್ಸಿನಲ್ಲೇ ಪ್ರಾರಂಭಿಸಿದ ಕೆಲಸವಾಗಿತ್ತದು. ಇಂದೂ, ತನ್ನ ಇಪ್ಪತ್ತನಾಲ್ಕನೆಯ ವಯಸ್ಸಿನಲ್ಲೂ ಅದನ್ನೇ ಅವನು ಆತ್ಮಾರ್ಥವಾಗಿ ಮಾಡುತ್ತಾ ಬಂದಿದ್ದಾನೆ. ಯಜಮಾನರು ಸಂತೋಷಪಟ್ಟಿದ್ದರು. ಅವನ ವಿವಾಹಕ್ಕಿರುವ ಖರ್ಚನ್ನು ಯಜಮಾನರೇ ಕೊಟ್ಟಿದ್ದರು. ಅವರು ಅವನೊಂದಿಗೆ ಹೀಗೆ ಹೇಳಿದ್ದರೂ ಕೂಡಾ: ''ನಾನು ಈ ಮುಪ್ಪತ್ತನೆಯ ತಾರೀಕು ದುಬಾಯಿಗೆ ಹೋಗುತ್ತಿದ್ದೇನೆ. ಅಲ್ಲಿ ಎರಡು ವಾರ ಇರುತ್ತೇನೆ. ನಾನು ಹೋದಾಗ ನೀನು ನಿನ್ನ ಹೆಂಡತಿಯನ್ನು ಒಂದು ವಾರ ಕರೆದುಕೊಂಡು ಬಂದು ಇಲ್ಲೇ ವಾಸವಾಗಿರುವ ಹುಚ್ಚುಮುಂಡೇದೇ. ನಿನಗೊಂದು ಹನಿಮೂನಾಗಿರಲಿ.''

ಸಲೀಂ ಆಲೋಚಿಸಿದ್ದು ಅದಾಗಿತ್ತು, ಆ ಬಂಗ್ಲೆಯನ್ನು ನೋಡುವಾಗ ಆಯಿಷಾಳ ಮುಖದಲ್ಲಿ ಕಂಡುಬರುವ ದಿಗ್ಭ್ರಾಂತಿಯನ್ನೂ, ಆಶ್ಚರ್ಯವನ್ನೂ ಅವನು ಮನಸ್ಸಿನಲ್ಲೇ ಕಾಣುತ್ತಾ ನಗುವನು. ಮೈದಾನದಂತಿರುವ ವಿಶಾಲವಾದ ಅಡಿಗೆ ಮನೆ. ಅದರಲ್ಲಿರುವ ಕುಕ್ಕಿಂಗ್ ರೇಂಜ್, ಎರಡು ಬಾಗಿಲುಗಳುಳ್ಳ ಎರಡು ಫ್ರಿಜ್‌ಗಳು, ವಾಷಿಂಗ್ ಮೆಷಿನ್.

ನಾಲ್ಕೈದು ತಿಂಗಳಿಗೊಮ್ಮೆ ಒಂದು ವಾರಾಂತ್ಯದಲ್ಲಿ ಎರಡು ದಿವಸದ ಮಟ್ಟಿಗೆ ಗಂಡನೊಂದಿಗೆ ಬಂದಿರುತ್ತಿದ್ದ ಅವರ ಹೆಂಡತಿ ಕದೀಜಮ್ಮ ಸಲೀಂನೊಂದಿಗೆ ಅಸೂಯೆಯಿಂದ ಹೇಳುತ್ತಿದ್ದದುಂಟು:

'ನೀನು ಅದೃಷ್ಟವಿರುವವನು ಕಣೋ. ನೀನು ಇರುವುದು ಸ್ವರ್ಗದಲ್ಲಲ್ಲವೇ''

ಆಕೆ ಹೇಳಿದ್ದು ಸರಿಯಾಗಿತ್ತು, ಕೋಜಿಕ್ಕೋಡ್‌ನಲ್ಲಿರುವ ಯಜಮಾನರ ಮನೆಯು ಇದಕ್ಕಿಂತ ದೊಡ್ಡದು. ನಗರದ ಮಧ್ಯೆ ಐವತ್ತು ಸೆಂಟ್ಸ್‌ನಲ್ಲಿ ಕಟ್ಟಿಸಿದ್ದು. ಇಲ್ಲಿರುವುದಕ್ಕಿಂತ ಅಲ್ಲಿ ಹೆಚ್ಚು ಸಾಮಾನುಗಳಿವೆ. ಆದರೆ ಅದು ಸ್ವರ್ಗವಲ್ಲ. ಇಲ್ಲಿ, ಈ ಏಕಾಂತತೆಯಲ್ಲಿ ಅವನು ಸ್ವರ್ಗವನ್ನೇ ನಿರ್ಮಿಸಿದ್ದನು.

ಸಲೀಂ ಸ್ವರ್ಗವನ್ನು ನಿರ್ಮಿಸುವುದರಲ್ಲಿ ಪರಿಣತನಾಗಿದ್ದನು.

ಅವರಿಬ್ಬರೂ ಬಂಗ್ಲೆಯ ಟೆರೇಸ್‌ನಲ್ಲಿದ್ದು ಕೆಳಗೆ ಕಾಣುವ ಗುಡ್ಡದ ತಪ್ಪಲಿನಲ್ಲಿನ ರಸ್ತೆಯ ಮೂಲಕ ಕೆಲಸಗಾರರು ತಮ್ಮ ಕೆಲಸವನ್ನು ಮುಗಿಸಿ ಮರಳಿ ಹೋಗುತ್ತಿರುವುದನ್ನು ನೋಡಿದರು. ತಮ್ಮ ಗೂಡನ್ನು ಸೇರಿಕೊಳ್ಳುವ ಪಕ್ಷಿಗಳು ಮರಕೊಂಬೆಗಳಲ್ಲಿ ಒಂದು ನಿಮಿಷ ವಿಶ್ರಮಿಸಿ ಮತ್ತೆಯೂ ಹಾರಿ ಹೋಗುತ್ತಿದ್ದವು. ಸೂರ್ಯನು ಗುಡ್ಡದ ಹಿಂದೆ ಮರೆಯಾದನು.

ಅವರು ಅಡಿಗೆ ಮನೆಗೆ ಬಂದು ಅಡಿಗೆ ಮಾಡಲು ಪ್ರಾರಂಭಿಸಿದರು. ಅಡಿಗೆ ಮಾಡುವುದರಲ್ಲಿ ಆಯಿಷಾ ಪಳಗಿದವಳು. ತುಪ್ಪದ ಅನ್ನ, ಬಿರಿಯಾನಿಯ ವಾಸನೆಯನ್ನು ಅವನು ಆಸ್ವಾದಿಸಿದನು.

ಆಕೆ ಸ್ನಾನಕ್ಕೆ ಹೋಗುವ ಮುನ್ನ ಅವನು ಸ್ನಾನದ

⇨ TWO

ಕೋಣೆಗೆ ಹೋಗಿ ಅವಳಿಗೆ ಮಲಗಿ ಮೀಯಲೆಂದು ಬಾತ್‌ಟಬ್‌ನಲ್ಲಿ ನೀರು ತುಂಬಿಸಿದನು.

'ನಾನೇ ಸ್ನಾನ ಮಾಡಿಸಲೇ?'

'ಛೀ... ನಿಮಗೆ ನಾಚಿಕೆ ಇಲ್ಲವಲ್ಲಾ?''

ಅವಳು ಅವನನ್ನು ಹೊರಕ್ಕೆ ಕಳುಹಿಸಿ ಸ್ನಾನದ ಕೋಣೆಯ ಬಾಗಿಲು ಹಾಕಿಕೊಂಡಳು.

ಹೊರಗೆ ಗಾಢಾಂಧಕಾರವಾಗಿತ್ತು. ತನ್ನ ಮಧುಮಾಸ ರಾತ್ರಿ ಇವತ್ತೇ ಪ್ರಾರಂಭವಾಗುವುದೆಂದು ಅವನು ನೆನೆದನು. ತನ್ನ ಮನೆಯಲ್ಲೂ ಅವಳ ಮನೆಯಲ್ಲೂ ಅವನಿಗೆ ಏಕಾಂತತೆಯ ಅನುಭವವಾಗಿರಲಿಲ್ಲ. ಅಕ್ಕಪಕ್ಕದ ಕೋಣೆಗಳಲ್ಲಿ ಜನರಿರುತ್ತಿದ್ದರು. ಅಲ್ಲಿ ಸ್ವಲ್ಪ ಶ್ವಾಸಬಿಟ್ಟರೂ ಸಾಕು, ಮನೆಯಲ್ಲಿರುವವರಿಗೆ ಗೊತ್ತಾಗುತ್ತೆಂದು ಅನ್ನಿಸುತ್ತಿತ್ತು. ಬಾಗಿಲ ಹಲಗೆಯ ಸಂಧಿಗಳಿಂದ ಬೇರೆಯವರ ದೃಷ್ಟಿ ಹೊರಚಾಚಿ ಬರುತ್ತಿರುವುದಾಗಿ ಅವನಿಗನ್ನಿಸುತ್ತಿತ್ತು.

ಇಲ್ಲಿ, ಈ ಗುಡ್ಡದ ಮೇಲಿನ ಏಕಾಂತತೆಯ ಕೋಣೆಯಲ್ಲಿ, ಅವರು ಏಕಾಂಗಿಗಳಾಗಿದ್ದರು. ಅವನೂ ಅವಳೂ ಮಾತ್ರ. ಅದು ಇವತ್ತಿಗೆ ಮಾತ್ರವಲ್ಲ, ಇನ್ನೂ ಬರಲಿರುವ ಮಧುಮಾಸ ರಾತ್ರಿಗಳಲ್ಲೆಲ್ಲಾ.

ಆಯಿಷಾಳ ಸ್ನಾನವು ಮುಗಿದಿತ್ತು. ಸ್ನಾನದ ಕೋಣೆಯಲ್ಲಿದ್ದ ಗ್ಲಾಸ್ ಬೀರುವಿನಿಂದ ಅವನು ಅತ್ತರ್ ಹೊರತೆಗೆದು ಆಯಿಷಾಳ ದೇಹದ ಮೇಲೆ ಸಿಂಪಡಿಸಿದನು. ಅವನು ಸ್ನಾನ ಮಾಡಲು ಹೋದನು. ಸ್ನಾನ ಮುಗಿಸಿ ಹೊರಕ್ಕೆ ಬಂದಾಗ ಅವನಿಗೆ ಚೆನ್ನಾಗಿ ಹಸಿವಾಗಿತ್ತು. ಅವನು ಆಯಿಷಾಳಿಗೆ ಹೇಳಿದನು.

## *ಸ್ವರ್ಗಸುಖದ ಕಲ್ಪನೆಯಲ್ಲೇ ಅರಮನೆಯಂಥ ಆ ಬಂಗ್ಲೆಗೆ ಸಲೀಂ ಆಯಿಷಾಳೊಂದಿಗೆ ಬಂದ... ಆದರೆ ವಿಧಿ ಬೇರೆಯೇ ಎಣಿಸಿತ್ತು!*

''ಊಟ ಮಾಡೋಣ''

ಸಲೀಂ ಚಿತ್ತಾರಗಳುಳ್ಳ ಪ್ಲೇಟ್‌ಗಳನ್ನು ತೆಗೆದುಕೊಂಡು ಅವುಗಳನ್ನು ಒರೆಸಿಟ್ಟನು. ಅವರು ಅಕ್ಕಪಕ್ಕವಾಗಿ ಕುಳಿತರು.

'ಹಸಿವು ತಡೆಯಲಾಗುತ್ತಿಲ್ಲ', ಆಯಿಷಾ ಹೇಳಿದಳು.

ಅವಳಿಗೆ ಊಟ ಮಾಡಲು ಆತುರವಾಗಿತ್ತು. ಸಲೀಂ ಬಿರಿಯಾನಿ ಪಾತ್ರೆಯ ಮುಚ್ಚಳವನ್ನು ತೆಗೆದನು. ಬಿರಿಯಾನಿಯ ವಾಸನೆಯು ಅಲ್ಲೆಲ್ಲಾ ಪಸರಿಸಿತು.

''ಒಳ್ಳೇ ವಾಸನೆ'' ಅವಳು ಮೂಗರಳಿಸಿದಳು.

ಥಟ್ಟನೆ ಅವನು ಕಿವಿಯಾನಿಸಿ ಕೇಳಿದನು. ಅವನ ಮುಖವು ವಿವರ್ಣಗೊಂಡಿತು. ಗುಡ್ಡವನ್ನು ಹತ್ತಿ ಬರುತ್ತಿರುವ ಕಾರಿನ ಮರ್ಮರ ಧ್ವನಿ. ಅದವನಿಗೆ ಪರಿಚಿತವಾದ ಶಬ್ದವಾಗಿತ್ತು. ಅವನು ಓಡಿ ಹೋಗಿ ಕಿಟಕಿ ಮೂಲಕ ನೋಡಿದನು.

''ಅಯ್ಯೋ ದೇವರೇ''

ಗುಡ್ಡದ ತಪ್ಪಲಿನಿಂದ ಬಂಗ್ಲೆಗಿರುವ ಅಗಲ ಕಮ್ಮಿಯಾದ ರಸ್ತೆಯ ಮೂಲಕ ಮೇಲಕ್ಕೆ ಬರುತ್ತಿರುವ ಕಾರಿನ ಹೆಡ್‌ಲೈಟ್ ಕಾಣುತ್ತಿದೆ. ಅವನು ಬೆವರಿದನು.

'ಮೋಸವಾಗಿ ಹೋಯಿತಲ್ಲ, ಆಯಿಷಾ''

ಅವನು ಓಡಿಹೋಗಿ ಸ್ನಾನದ ಕೋಣೆಯಲ್ಲಿ ಆಯಿಷಾ ಬಿಚ್ಚಿಟ್ಟಿದ್ದ ಉಡುಪುಗಳೆಲ್ಲವನ್ನೂ ಬಾಚಿ ತೆಗೆದನು. ತನ್ನ ಸೂಟ್‌ಕೇಸನ್ನು ಕೈಯಲ್ಲಿ ಹಿಡಿದುಕೊಂಡು ಆಯಿಷಾಳಿಗೆ ಹೇಳಿದನು:

''ಆಯಿಷಾ ಬೇಗ ಬಾ''

ಅವನು ಅವಳನ್ನು ಕರೆದುಕೊಂಡು ಬಂಗ್ಲೆಯ ಒಂದು ಮೂಲೆಯಲ್ಲಿರುವ ತನ್ನ ಪುಟ್ಟ ಕೋಣೆಗೆ ಹೋದನು. ಅದು ಬಹು ಚಿಕ್ಕದಾಗಿತ್ತು. ಅಲ್ಲೊಂದು ಚಿಕ್ಕ ಕಿಟಕಿ ಕೊಳಕಾದ ಗೋಡೆಗಳು. ಒಂದು ಪಕ್ಕದಲ್ಲಿ ಸಣ್ಣಮಂಚ. ಅವನು ತನ್ನ ಆ ಕೋಣೆಯನ್ನು ಆಯಿಷಾಳಿಗೆ ತೋರಿಸಿರಲಿಲ್ಲ. ಹಾಗೆ ತೋರಿಸುವ ಅವಶ್ಯಕತೆಯು ಉಂಟಾಗುವುದೆಂದು ಅವನೆಂದುಕೊಂಡಿರಲೂ ಇಲ್ಲ. ಅವನು ಆ ಕೋಣೆಗೆ ಯಾವಾಗಲಾದರೊಮ್ಮೆ ಬರುತ್ತಿದ್ದನಷ್ಟೆ. ದಿಗ್ಭ್ರಾಂತಳಾಗಿ ನಿಂತ ಆಯಿಷಾಳನ್ನು ಮಂಚದ ಮೇಲೆ ಕುಳ್ಳಿರಿಸಿ ಅವನು ಹೇಳಿದನು.

''ಮಗು, ನೀನು ಸ್ವಲ್ಪ ಹೊತ್ತು ಇಲ್ಲೇ ಇರು. ನಾನೀಗ ಬರುತ್ತೇನೆ''.

ಸಲೀಂ ಕೋಣೆಯ ಬಾಗಿಲು ಹಾಕಿ ಹೊರಗಿನಿಂದ ಬೀಗ ಹಾಕಿದನು. ಕಾರಿಡಾರ್‌ನ ಮೂಲಕ ವರಾಂಡಕ್ಕೆ ಬರುವ ಹೊತ್ತಿಗೆ ಕಾರ್‌ನ ಹಾರನ್ ಕೇಳಿದನು. ಅವನು ಗೇಟ್ ಬಳಿಗೆ ಓಡಿ ಹೋದನು. ಕಾರಿನಲ್ಲಿ ಸಾಹೇಬ್ ಮಾತ್ರವೇ ಇದ್ದರು. ಅವನು ಕಾರಿನಿಂದ ಯಜಮಾನರ ಬ್ರೀಫ್‌ಕೇಸ್ ತೆಗೆದುಕೊಂಡು ಕಾರಿನ ಬಾಗಿಲು ಹಾಕಿದನು. ಯಜಮಾನರ ಹಿಂದೆ ನಡೆದನು. ಸಾಹೇಬ್ ಹೇಳಿದರು.

''ದುಬಾಯಿಗೆ ಮುಂದಿನ ವಾರವೇ ಹೋಗುತ್ತಿರುವುದು.''

ಸಾಹೇಬರು ಒಳಕ್ಕೆ ಬಂದರು. ಬಿರಿಯಾನಿಯ ವಾಸನೆಯು ಅವರ ಮೂಗಿಗೆ ತಾಗಿರಬೇಕೆಂದು ತೋರುತ್ತೆ, ಅವರು ಕೇಳಿದರು.

''ಏನೋ, ಏನಾದರೂ ಮಾಡಿಟ್ಟಿದ್ದೀಯೇನೋ''

''ಬಿರಿಯಾನಿ ಇದೆ''

'ಅಂದರೆ, ನಾನು ಬರುವುದು ನಿನಗೆ ಗೊತ್ತಿತ್ತೇನು? ನಾನು ಮಹಮ್ಮದ್‌ಗೆ ನಿನಗೆ ಫೋನ್ ಮಾಡಿ ತಿಳಿಸಲು ಹೇಳಿದ್ದೆ. ಅವನೊಬ್ಬ ಪೆದ್ದನಲ್ಲವೇ! ಕರೆದು ಹೇಳಿರಲಾರನೆಂದುಕೊಂಡಿದ್ದೆ. ಹಾಗಾದರೆ, ನಾನು ಮಿಂದು ಬರುತ್ತೇನೆ. ನೀನು ಎಲ್ಲವನ್ನೂ ಮೇಜಿನ ಮೇಲೆ ತಂದಿಡು.

ಸಾಹೇಬರು ಸ್ನಾನದ ಕೋಣೆಯನ್ನು ಪ್ರವೇಶಿಸಿದಾಗ ಅವನು ಕಾರಿಡಾರ್‌ನ ಮೂಲಕ ಓಡಿಹೋದನು. ಬೀಗದ ಕೈ ಹಾಕಿ ಅವನು ತನ್ನ ಕೋಣೆಯ ಬಾಗಿಲನ್ನು ತೆರೆದು ಒಳ ಪ್ರವೇಶಿಸಿದನು. ಆಯಿಷಾ ಅವನು ಕೂರಿಸಿದ್ದಂತೆಯೇ ಕುಳಿತಿದ್ದಳು. ಅವಳು ಬೆಳಚಿಕೊಂಡಿದ್ದಳು. ದೊಡ್ಡದೊಂದು ಬಂಗ್ಲೆಯ ಯಾವುದೋ ಮೂಲೆಯಲ್ಲಿನ ಒಂದು ಪುಟ್ಟ ಕೋಣೆಯಲ್ಲಿ ಮಬ್ಬಾದ ಬೆಳಕಿನಲ್ಲಿ ಅವಳು ಏಕಾಕಿಯಾಗಿದ್ದಳು. ಸಲೀಂ ಅವಳ ಬಳಿ ಬಂದು ಅವಳನ್ನು ತಬ್ಬಿಕೊಂಡನು.

''ಪ್ರಿಯೆ, ಸ್ವಲ್ಪ ಹೊತ್ತಿನವರೆಗೂ ಕ್ಷಮೆಯಿಂದಿರು. ನಾನು ಸಾಹೇಬರಿಗೆ ಬಿರಿಯಾನಿ ಕೊಟ್ಟು ಬರುತ್ತೇನೆ.''

ಅವಳು ಏನನ್ನೂ ಮಾತನಾಡದೆ ಗಾಬರಿಯಿಂದ ಕುಳಿತು ಬಿಟ್ಟಳು. ಅವನಿಗೆ ಹೋಗಲು ಆತುರವಾಗಿತ್ತು. ಸಾಹೇಬರಿಗೇನಾದರೂ ಅವಶ್ಯಕತೆ ಇದ್ದರೋ? ಅವನು ಅವಳ ಕೆನ್ನೆಗೊಂದು ಮುತ್ತನ್ನಿತ್ತು ಆತುರಾತುರವಾಗಿ ಹೊರಬಂದನು.

ಸಾಹೇಬರು ಊಟವನ್ನು ಸವಿಯುತ್ತಾ ಕುಳಿತಿದ್ದರು.

''ನೀನು ನಿನ್ನ ಹೆಂಡತಿ ಕೈಯಲ್ಲಿ ಬಿರಿಯಾನಿ ಮಾಡಿಸುವುದನ್ನು ಕಲಿತೆ ಅಲ್ಲವೇನೋ? ಸರಿ, ನಿನ್ನ ಹೆಂಡತಿ ಹೇಗಿದ್ದಾಳೋ?''

ಸಲೀಂ ನಕ್ಕನಷ್ಟೆ.

''ನೀನು ಬೇಗ ಎಲ್ಲ ಎತ್ತಿಡು. ಅನಂತರ ನನ್ನ ಕಾಲನ್ನೊಮ್ಮೆ ನೀವಿ ಕೊಡು. ಕೋಚಿಕ್ಕೋಡ್‌ನಿಂದ ಇಲ್ಲಿಯವರೆಗೂ ಒಂದೇ ಉಸಿರಿನಲ್ಲಿ ಕಾರ್ ಓಡಿಸಿ ಬಂದಿದ್ದೇನೆ.''

ಸಾಹೇಬರು ಎದ್ದು ಕೈ ತೊಳೆದು ಮಲಗುವ ಕೋಣೆಗೆ ಹೋದರು. ಸಲೀಂ ಮಂಚವನ್ನೊರಸಿ ಶುದ್ಧ ಮಾಡಿದನು. ಬಿರಿಯಾನಿಯನ್ನು ತೆಗೆದುಕೊಂಡು ಆಯಿಷಾಳ ಬಳಿ ಹೋದರೋ ಎಂದು ಅವನು ಒಂದು ನಿಮಿಷ ಆಲೋಚಿಸಿದನು. ಆದರೆ ಸಾಹೇಬರು ಹುಡುಕಿಕೊಂಡು ಬರುವುದಾದರೆ ತಕರಾರಾಗುತ್ತೆ. ಆಯಿಷಾ ಹಸಿದಿರುತ್ತಾಳೆಂದು ಗೊತ್ತು. ಆದರೆ ಏನು ಮಾಡುವುದು? ಅವನು ಅವರು ಮಲಗಿದ್ದ ಕೋಣೆಗೆ ಹೋದನು.

ಸಾಹೇಬರು ಮಲಗಿದ್ದರು. ಅವನು ದೀಪವನ್ನು ಚಲಿಸಿ ಮಂಚದಲ್ಲಿ ಮಲಗಿದ್ದ ಸಾಹೇಬರ ಕಾಲಿನ ಬಳಿ ಹೋಗಿ ಕುಳಿತನು. ಕಾಲು ನೀವ ತೊಡಗಿದನು. ರಾತ್ರಿ ದೀಪದ ಮಬ್ಬಾದ ಬೆಳಕಿನಲ್ಲಿ ಅವನು ಕಾಲುಗಳನ್ನು ನೀವುತ್ತಿರುವ ಆ ಸುಖದಲ್ಲಿ ಸಾಹೇಬ್ ಮುಲುಗಿದನು. ಸಲೀಂ ಆಯಿಷಾಳ ಮೃದುವಾದ ಶರೀರವನ್ನು ನೆನೆದನು. ಅವನು ನಾಲ್ಕು ರಾತ್ರಿಗಳನ್ನು ಅವಳೊಂದಿಗೆ ಕಳೆದಿದ್ದನು. ರಾತ್ರಿಗಳೂ ಅವಳು ತನ್ನ ಉಡುಪನ್ನು ಬಿಚ್ಚಲು ಅವನನ್ನು ಸಮ್ಮತಿಸಿರಲಿಲ್ಲ. ಯಾರಾದರೂ ಬಾಗಿಲನ್ನು ತಟ್ಟುವುದಾದರೋ ಎಂದಾಗಿತ್ತು ಅವಳ ಸಮಸ್ಯೆ. ಅವಳು ಹೇಳಿದ್ದಳು:

''ನಿಮ್ಮ ಎಸ್ಟೇಟ್‌ಗೆ ಹೋದ ಮೇಲೆ ಸಾಕು. ನಾನು ಎಲ್ಲವನ್ನೂ ಸಮ್ಮತಿಸುತ್ತೇನೆ.''

ಹದಿನೆಂಟರ ವಯಸ್ಸಿನ ಸಂಕೋಚವು ಅವಳಲ್ಲಿತ್ತು. ಅವನು ಪುನಃ ಅದಕ್ಕಾಗಿ ಪ್ರಯತ್ನಿಸಿದಾಗ ಅವಳು ಹೇಳಿದಳು:

''ನಾನೀಗ ತಂದೆಯನ್ನು ಕರೆಯುತ್ತೇನೆ. ನನಗೆ ಉಪದ್ರವ ಮಾಡುತ್ತಿದ್ದಾನೆಂದು ಹೇಳುತ್ತೇನೆ.''

ಸಲೀಂ ಅದನ್ನು ನೆನೆದು ನಕ್ಕನು.

''ಏನೋ ಮುಂಡೇದೇ. ನಗುತ್ತಿರುವೆಯಲ್ಲಾ?'' ಸಾಹೇಬ್ ಕೇಳಿದರು. ಅವನ ಸ್ತ್ರೀಯರಂತಿದ್ದ ಮುಖವು ನಾಚಿಕೆಯಿಂದ ಕೆಂಪಾಯಿತು.

''ನೀನು ಅಲ್ಲಿ ಹಾಸಿಗೆಯಲ್ಲಿ ಮಲಗೋ, ಮುಂಡೇದೆ''

ಸಾಹೇಬರು ಜೋರಾಗಿ ಉಸಿರಾಡುತ್ತಿದ್ದರು. ಗೊರಕೆ ಹೊಡೆಯುತ್ತಿದ್ದರು. ಅವರ ಎದೆಯಲ್ಲಿನ ನರೆತ ರೋಮಗಳ ನಡುವಿನಿಂದ ಬರುತ್ತಿದ್ದ ಸುವಾಸನೆಯು ಅವನಿಗೆ ಪರಿಚಿತವಾಗಿತ್ತು. ಅವನು ತನ್ನ

NEXT PAGE...

ಹದಿನಾರನೆಯ ವಯಸ್ಸಿನಲ್ಲಿ ಒಬ್ಬ ಅನಾಥನಾಗಿ ಈ ಬಂಗ್ಲೆಗೆ ಬಂದಿದ್ದನು. ಆಗ ಇದೇ ವಾಸನೆಯಾಗಿತ್ತು ಅವನಿಗೆ ಸಮಾಧಾನವನ್ನಿತ್ತಿದ್ದು. ಅವನ ಅಜ್ಜನಾಗಿತ್ತು ಅವನನ್ನು ಯಜಮಾನನ ಬಳಿಗೆ ಕರೆದುಕೊಂಡು ಬಂದಿದ್ದು. ಅದೊಂದು ಸಂಜೆಯಾಗಿತ್ತು. ನಾಲ್ಕು ಗಂಟೆಗಳ ಕಾಲ ಬಸ್ ಪ್ರಯಾಣ ಮಾಡಿ ಸುಸ್ತಾಗಿದ್ದನು. ಬಹು ಸುಸ್ತಾಗಿದ್ದನು. ಸಾಹೇಬರು ಕೇಳಿದರು:

''ನಿನ್ನ ಹೆಸರೇನು?''

''ಸಲೀಂ''

''ನಿನಗೆ ಹಸಿವಾಗುತ್ತಿದೆಯೇನು?''

ಅವನು ಏನೂ ಮಾತನಾಡಲಿಲ್ಲ. ತನ್ನ ತಾಯಿಯ ಮರಣದ ನಂತರ ಯಾರೂ ಅವನ ಹಸಿವಿನ ಬಗ್ಗೆ ವಿಚಾರಿಸಲಿಲ್ಲ. ತಂದೆ ಇರುವುದೂ ಇಲ್ಲದಿರುವುದೂ ಒಂದೇ ಆಗಿತ್ತು. ಮತ್ತೆ ಅಜ್ಜನಾಗಿತ್ತು ಅವನನ್ನು ವಿಚಾರಿಸಿಕೊಳ್ಳುತ್ತಿದ್ದುದು. ಯಜಮಾನರು ಕೇಳಿದ ಪ್ರಶ್ನೆಗೆ ಅವನು ಅತ್ತನು. ಯಜಮಾನರು ಅವನ ಬಳಿ ಹೋಗಿ ಅವನ ತೋಳಿನ ಮೇಲೆ ಕೈಯಿಟ್ಟು ಅವನನ್ನು ಹತ್ತಿರಕ್ಕೆ ಸೆಳೆದುಕೊಂಡು ಹೇಳಿದ್ದರು:

'ನೀನು ನನ್ನ ಬಳಿ ಇರು. ಅದೃಷ್ಟ ಇದ್ದಲ್ಲಿ ನೀನು ಚೆನ್ನಾಗಿರುತ್ತಿ'' ಅವರು ಒಳಕ್ಕೆ ನೋಡಿ ಕರೆದರು. ವಯಸ್ಸಾದ ಸ್ತ್ರೀಯೊಬ್ಬಳು ಹೊರಕ್ಕೆ ಬಂದಳು.

''ಇವನನ್ನು ಒಳಗೆ ಕರೆದುಕೊಂಡು ಹೋಗಿ ಏನಾದರೂ ತಿನ್ನಲು ಕೊಡಿ''

ಅಂದು ರಾತ್ರಿ ಮಲಗುವ ಸಮಯದಲ್ಲಿ ಸಾಹೇಬರು ತಮ್ಮ ಕಾಲುಗಳನ್ನು ನೀವಲು ಹೇಳಿದರು. ಅವನಿಗೋ ಒಳ್ಳೇ ನಿದ್ರೆ ಹತ್ತಿತ್ತು. ಅವನು ಎಲ್ಲಿ ಮಲಗಬೇಕೆಂದು ಸಾಹೇಬರು ಹೇಳಿರಲಿಲ್ಲ. ಸಾಹೇಬರು ನಿದ್ರಿಸಿದಾದ ಮೇಲೆ ನೆಲದ ಮೇಲೆ ಹಾಸಿದ್ದ ರತ್ನಗಂಬಳಿಯ ಮೇಲೆ ಮಲಗೋಣವೆಂದು ಅಂದುಕೊಂಡಿದ್ದನು. ಆದರೆ ಅವನು ಸುಸ್ತಾಗಿದ್ದುದರಿಂದ ಅಲ್ಲೇ ಮಲಗಿಬಿಟ್ಟಿದ್ದ. ಬೆಳಗ್ಗೆ ಎಚ್ಚೆತ್ತಾಗ ಅವನು ಸಾಹೇಬರ ಅಪ್ಪುಗೆಯಲ್ಲಾಗಿದ್ದನು. ಅವರ ರೋಮಾವೃತವಾದ ಎದೆಯ ಮೇಲೆ ಅವನು ಮುಖವನ್ನು ಹುದುಗಿಸಿಕೊಂಡು ಮಲಗಿದ್ದನು. ಅವನಿಗೆ ಲಜ್ಜೆ ತೋರಿತ್ತು. ಜೊತೆಗೆ ಹೆದರಿಕೆಯೂ ಯಜಮಾನರು ರೇಗುವರೆಂದು ಹೆದರಿ ಅವನು ಥಟ್ಟನೆ ಏಳಲು ಪ್ರಯತ್ನಿಸಿದನು. ಯಜಮಾನರು ಎಚ್ಚೆತ್ತರು. ಕೋಪಗೊಳ್ಳುವ ಬದಲು ಅವರು ನಗುತ್ತಾ ಅವನನ್ನು ಕೇಳಿದ್ದರು.

''ಚೆನ್ನಾಗಿ ನಿದ್ರೆ ಮಾಡಿದೆಯೇನೋ''

ನರೆತಿದ್ದ ರೋಮಗಳಿರುವ ಎದೆಯಲ್ಲಿ ಸುವಾಸನೆಯನ್ನು ಆಗಲೇ ಅವನು ಗಮನಿಸಿದ್ದು ಅದು ಅವನನ್ನು ಬಹಳವಾಗಿ ಮನಮುಟ್ಟುವಂತಿತ್ತು.

ಇಂದೂ ಈ ಇಪ್ಪತ್ತ ನಾಲ್ಕನೆಯ ವಯಸ್ಸಿನಲ್ಲೂ, ಮದುವೆಯಾದ ನಂತರವೂ ಆ ಸುಗಂಧಪೂರಿತ ವಾಸನೆಯು ಅವನನ್ನು ಉತ್ತೇಜಿಸಿತು. ಆ ಅರಿವು ಅವನನ್ನು ಅಸ್ವಸ್ಥನನ್ನಾಗಿ ಮಾಡಿತು.

ಸಾಹೇಬರು ಪಕ್ಕಕ್ಕೆ ಹೊರಳಿ ಮಲಗಿ ನಿದ್ರಿಸಿದರು. ಸಲೀಂ ಎದ್ದು ಹೋಗಲು ಆತುರವನ್ನೇನೂ ಭಾವಿಸಲಿಲ್ಲ. ಹಾಗೆಯೇ ಮಲಗಿರುವುದರಲ್ಲಿ ಅವನು ಸಮಾಧಾನಪಟ್ಟನು. ಸಾಹೇಬರು ಅವನಿಗೆ ಬೇರಾಗಿ ಒಂದು ಕೋಣೆಯನ್ನೇ ಬಿಟ್ಟುಕೊಟ್ಟಿದ್ದರು. ಆದರೆ ಅವರ ಹೆಂಡತಿ ಕದೀಜಮ್ಮ ಇಲ್ಲದ ದಿವಸಗಳಲ್ಲೆಲ್ಲ ಅವನು ಈ ಕೋಣೆಯಲ್ಲೇ ಆಗಿತ್ತು ಮಲಗಿದ್ದುದು. ಆದ್ದರಿಂದ ಹೆಂಡತಿಯನ್ನು ಕರೆದುಕೊಂಡು ಬರುವುದಕ್ಕಿಂತ ಮುಂಚೆ ಅವನಿಗೆ ಒಂದು ಒಳ್ಳೇ ಹಾಸಿಗೆ ತೆಗೆದುಕೊಳ್ಳಲು ಸಾಹೇಬರು ಹೇಳಿದರು. ಆದರೂ ಅದನ್ನು ಅವನು ಕೇಳಿರಲಿಲ್ಲ.

ಆ ಮಲಗುವ ಕೋಣೆಯಲ್ಲಿನ ಮಬ್ಬಾದ ಬೆಳಕಿನಲ್ಲಿ ಮೆತ್ತಗಿನ ಸುಪ್ಪತ್ತಿಗೆಯಲ್ಲಿ ಮಲಗಿ ಅವನು ಆಲೋಚಿಸಿದನು. ಬಂಗ್ಲೆಯಲ್ಲಿನ ಒಂದು ಖಾಲಿಯಾದ ಮೂಲೆಯಲ್ಲಿ ತನಗೋಸ್ಕರ ಒಬ್ಬಳು ಹುಡುಗಿ ಕಾದಿದ್ದಾಳೆ. ಬೇರೆ ಯಾವುದೋ ಕಾಲದಲ್ಲಿ, ಬೇರೆ ಯಾವುದೋ ಸ್ಥಳದಲ್ಲಿ ನಡೆಯುತ್ತಿರುವ ಒಂದು ವಿಷಯದಂತೆ ಅವನು ಆಯಿಷಾಳ ಬಗ್ಗೆ ಆಲೋಚಿಸಿದನು. ಕೇವಲ ತನ್ನವಳಷ್ಟೇ ಆದ ಒಬ್ಬಳು ತನಗೆ ಬೇಕಾಗಿ ಕಾದಿರುವ ಒಬ್ಬಳು ಹದಿನೆಂಟು ವಯಸ್ಸು ಪ್ರಾಯದ ಹುಡುಗಿ. ಅವಳು ಬಹುಶಃ ಹೆದರಿ ನಡುಗುತ್ತಿರಬಹುದೆಂದನ್ನಿಸಿದಾಗ ಅವನು ಎದ್ದು ಸ್ನಾನದ ಕೋಣೆಗೆ ಹೋದನು.

ಅವನು ಒಂದು ಟ್ರೇನಲ್ಲಿ ಅಷ್ಟು ಹೊತ್ತಿಗಲ್ಲ ತಣ್ಣಗಾಗಿ ಹೋಗಿದ್ದ ಬಿರಿಯಾನಿ ಇತ್ಯಾದಿಯನ್ನು ತೆಗೆದುಕೊಂಡು ಕಾರಿಡಾರ್ ಮೂಲಕ ನಡೆದನು. ಸಮಯವು ಹನ್ನೆರಡು ಕಳೆದಿತ್ತು. ಟ್ರೇಯನ್ನು ನೆಲದ ಮೇಲಿಟ್ಟು ಬಾಗಿಲು ತೆರೆದನು. ತಟ್ಟನೇ ಗಾಬರಿಗೊಂಡನು. ಆಯಿಷಾ ಅಲ್ಲಿರಲಿಲ್ಲ. ಟ್ರೇ ಮಂಚದ ಮೇಲಿಟ್ಟು ಸುತ್ತಲೂ ನೋಡಿದನು.

ಬಿಕ್ಕುತ್ತಿರುವ ಶಬ್ದ. ಅವನು ಮಂಚದ ಕೆಳಗೆ ನೋಡಿದನು. ಅಲ್ಲಿ ಆಯಿಷಾ ಮುದುಡಿಕೊಂಡು ಮಲಗಿದ್ದಾಳೆ. ಸಲೀಂ ಅವಳನ್ನು ಹಿಡಿದೆಳೆದನು. ಅವಳು ಬಿಕ್ಕಿ ಬಿಕ್ಕಿ ಅಳುತ್ತಿದ್ದಳು. ಅವನು ಅವಳಿಗೆ ಮುತ್ತಿಟ್ಟನು.

''ಬಾ ಪ್ರಿಯೇ, ಉಣ್ಣೋಣ''

''ನನಗೆ ಬೇಡ'' ಅವಳು ಬಿಕ್ಕಿ ಬಿಕ್ಕಿ ಅಳುವುದರ ಮಧ್ಯೆ ಹೇಳಿದಳು.

''ಹಾಗೆ ಹೇಳಿದರಾಗುವುದಿಲ್ಲ'' ಸಲೀಂ ಹೇಳಿದನು. ''ಬಾ, ನಾನು ನಿನ್ನ ಬಾಯಲ್ಲಿಡುತ್ತೇನೆ.''

ಅವನು ಅವಳನ್ನು ಮಡಿಲಲ್ಲಿ ಕೂರಿಸಿಕೊಂಡು ಬಿರಿಯಾನಿಯನ್ನು ಬಾಯಲ್ಲಿಟ್ಟುಕೊಟ್ಟನು. ಅವನು ಅವಳಿಗೆ ತಂದೆಯಾದನು. ಅವಳು ಅವನ ಮುದ್ದಿನ ಮಗಳು. ಬಿರಿಯಾನಿಯನ್ನು ತಿನ್ನಿಸಿದ ನಂತರ ಆಯಿಷಾಳನ್ನು ಮಡಿಲಲ್ಲಿ ಮಲಗಿಸಿಕೊಂಡು ಅವಳ ತಲೆಯನ್ನು ನೇವರಿಸಿದನು. ಅವಳು ಕ್ರಮೇಣ ನಿದ್ರಿಸಿದಳು. ಅವನು ಅವಳನ್ನು ಹಾಸಿಗೆಯಲ್ಲಿ ಮಲಗಿಸಿದನು. ಒಂದು ಪುಟ್ಟ ಮಗುವಿನಂತಾಗಿತ್ತು ಅವನು ಅವಳನ್ನು ಹಾ, ಮಲಗಿಸಿದ್ದು. ಹಾಸಿಗೆಯು ಗಟ್ಟಿಯಿಲ್ಲದೆ ಕಲ್ಲಿನಂತಿತ್ತು. ಬೆಡ್‌ಷೀಟ್ ಅದರೋ ಕೊಳೆಮುದ್ದೆಯಾಗಿ ವಾಸನೆ ಹೊಡೆಯುತ್ತಿತ್ತು. ಅವನು ಕೆಲವು ನಿಮಿಷಗಳ ಹಿಂದೆ ಮಲಗಿದ್ದ ಮೆತ್ತಗಿನ ಫೋಮ್‌ರಬ್ಬರ್ ಹಾಸಿಗೆಯನ್ನು ನೆನೆದನು. ಅವನು ಸಾಹೇಬರು ಮಲಗುವ ಕೋಣೆಯಲ್ಲಿನ ಏರ್‌ಕಂಡಿಷನ್‌ರನ್ನು ಆಯಿಷಾಳಿಗೆ ತೋರಿಸಿರಲಿಲ್ಲ. ಆ ಕೋಣೆಯಲ್ಲಿ ಮಲಗುವುದಕ್ಕಿಂತ ಮುಂಚೆ ಅವಳಿಗೆ ಗೊತ್ತಾಗದೇನೇ ಅದನ್ನು ಆನ್ ಮಾಡಬೇಕೆಂದೂ ಕೋಣೆಯು ಕ್ರಮೇಣ ತಂಪಾಗುವುದನ್ನು ಕಂಡು ಅವಳು ಆಶ್ಚರ್ಯಪಡಬೇಕೆಂದೂ ಅವನು ಭಾವಿಸಿದ್ದನು. ಆ ತಂಪಿನಲ್ಲಿ ಸ್ವರ್ಗವನ್ನು ಕಟ್ಟುವೆನೆಂದೂ ಅವಳನ್ನು ಸ್ವಂತ ಮಾಡಿಕೊಳ್ಳುವೆನೆಂದೂ ಅವನು ಆಶಿಸಿದ್ದನು.

ಅವನಿಗೆ ಊಟ ಮಾಡಬೇಕೆಂದು ಅನಿಸಲಿಲ್ಲ. ಅವನು ಕಿಟಕಿಯ ಮೂಲಕ ಹೊರಕ್ಕೆ ನೋಡಿದನು. ಕತ್ತಲೆ ಮಾತ್ರ. ಬಂಗ್ಲೆಯ ಮುಂಭಾಗದಲ್ಲಿ ಉರಿಯುತ್ತಿರುವ ದೀಪದ ಬೆಳಕು ಹಿಂಭಾಗಕ್ಕೆ ಹರಡಿರಲಿಲ್ಲ.

ಅವನು ಬಾಗಿಲು ತೆರೆದನು. ಹೊರಗಿಳಿದನು. ಆಕಾಶದಲ್ಲಿ ನಕ್ಷತ್ರಗಳು ಪ್ರಕಾಶಿಸುತ್ತಿದ್ದವು. ತಂಪಾಗುತ್ತಿರುವ ಕತ್ತಲೆಯಲ್ಲಿ ಇಳಿದು ನಡೆಯುವಾಗ ಅವನು ಯೋಚಿಸಿದನು. ತನ್ನ ಸ್ವರ್ಗವು ಇನ್ನೂ ಎಷ್ಟು ದೂರವಿದೆ?

**BACK TO THE MAIN PAGE...**